ಮಾಡುವ ಸಂದರ್ಭದಲ್ಲಿ ತಾವು ಸ್ವಲ್ಪಪ್ರಯೋಜನ ಕೊಟ್ಟಿದ್ದೀರೆಂದು ಹೇಳಬೇಕಾಗುತ್ತದೆ. ಇವತ್ತು ರೈತ ಸಮೂಹದವರು ಕೇಂದ್ರ ಸರ್ಕಾರದ ಮುಂದೆ, ರಾಜ್ಯ ಸರ್ಕಾರದ ಮುಂದೆ ಚಳುವಳಿ ಮಾಡತಕ್ಕ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಸೀಮಿತವಾದ ವಿಚಾರಗಳನ್ನು ಅದರ ಮುಂದಿಟ್ಟು, ರಾಜ್ಯ ಸರ್ಕಾರಕ್ಕೆ ಸೀಮಿತವಾದ ವಿಚಾರಗಳನ್ನು ಈ ಸದನದ ಮುಂದಿಟ್ಟು ಚರ್ಚೆ ಮಾಡಬೇಕು, ಏಕೆಂದರೆ ತಾವು ಪಕ್ಷದ ಪದಾಧಿಕಾರಿಗಳು ಅಲ್ಲ. ಮುಖ್ಯಮಂತ್ರಿಯಾಗಿ ಕಾನೂನು ವ್ಯವಸ್ಥೆ ಮಾಡಬೆ ಕಾದವರು ಮಾತನಾಡುವಾಗ ರಾಜ್ಯದಲ್ಲಿರತಕ್ಕ ರೈತರ ಮೇಲೆ ದೃಷ್ಟಿ ಹೋಗದೆ ಕೇಂದ್ರ ಸರ್ಕಾರದ ಮೇಲೆ ಪ್ರಯೋಜನೆಯ ದೃಷ್ಟಿ ಆಗಿದೆ. ಇದು ನಿಮ್ಮ ಹೇಳಿಕೆ ಆ ರೀತಿ ನಿವು ಹೇಳಿದ್ದನ್ನು ಅದನ್ನು ಸರಿ ಮಾಡಿ. ನಾನು ಸರ್ಕಾರಕ್ಕೆ ಎಚ್ಚರಿಕೆ ನೀಡುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಆಕ್ಷೇಪಣೆಯೂ ಇಲ್ಲ. ಮುಖ್ಯಮಂತ್ರಿಗಳು ಹೇಳಿಕೆ ಕೊಡುವಾಗ ಕೆಲವು ಶಬ್ದಗಳನ್ನು ಪ್ರಯೋಗ ಮಾಡಿದ್ದರಿಂದ ಆಗತಕ್ಕ ಸಾಧಕಭಾದಕಗಳನ್ನು ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅದನ್ನು ತಿಳಿದುಕೊಂಡೇ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಿಳಿದುಕೊಂಡು ಹೇಳಿದ್ದರೆ ಸರಿ. ನಾವು ಬುದ್ಧಿವಂತಿಕೆಯಿಂದ ಕಡಿಮೆ ಇರಬಹುದು. ಜನಸಾಮಾನ್ಯರು ತಮ್ಮ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವಾಗ ರೈತರಿಗೆ ಅದರಿಂದ ತೊಂದರೆ ಆಗಬಾರದೆಂದು ಹೇಳಿದೆ ಅಷ್ಟೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬಡ ರೈತರು ಬಹಳ ತೊಂದರೆಗೆ ಈಡಾಗುತ್ತಿದ್ದಾರೆ. ರುದ್ರಪ್ಪನವರು ರೈತಸಂಘದ ಗುತ್ತೇದಾರಿ ತೆಗೆದುಕೊಂಡ ಹಾಗೆ ಇದೆ.

ಅಧ್ಯಕ್ಷರು.—ಮುಖ್ಯವಾದ ವಿಚಾರನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ, ಸಾಕು.

The Karnataka Educational Institutions (Prohibition of Capitation Fee) Bill 1984

Leave to introduce

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರ್ಣಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇದ) ಮಸೂದೆಯನ್ನು ಮಂಡಿಸಲು ಅನುಮತಿ ಕೋರುತ್ತೇನೆ.

MR. SPEAKER.—The question is :

"That leave be granted to introduce the Karnataka Educational Institutions (Prohibition of Capitation Fee) Bill, 1984."

The motion was adopted and the bill was granted

SRI B. RACHAIAH.—I Introduce the Karnataka Educational Institutions (Prohibitions of Capitation Fee) Bill 1984

MR. SPEAKER.—The Bill is Introduced. Annexure.